ಎನ್ನುವುದನ್ನು ಚೆಕ್ ಮಾಡಿ ರಿವ್ಯೂ ಮಾಡಿ ಅವರು ಪಾಲೋ ಮಾಡದಿದ್ದರೆ ಮುಂದೆ ಏನು ಮಾಡಬೇಕು, ಯಾವ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಅವರು ಮಾಡುತ್ತಾರೆ ಇನ್ನು ಗುಲ್ಬರ್ಗ ಜಿಲ್ಲೆ ಬಗ್ಗೆ ಮಾನ್ಯ ಸದಸ್ಯರು ಅಂಕಿಅಂಶಗಳನ್ನು ಕೇಳಿದರು ಆ ಅಂಕಿಅಂಶಗಳು ಈಗ ನನ್ನ ಹತ್ತಿರ ಇಲ್ಲ. ವಿವರಗಳನ್ನು ಬೇಕಾದರೆ ತರಿಸಿ ಕೊಡುತ್ತೇನೆ.

ಸುಬ್ರಮ್ಮಣ್ಯದಿಂದ ಹಿರೇಕೆರೂರ್‌ಗೆ ಬಸ್ಸು ಸಂಚಾರದ ಬಗ್ಗೆ

೨೯೭೨ ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನ ಅಜ್ಜಂಪುರ ಬುಕ್ಕಾಂಬುಧಿ ಮುಖಾಂತರ ಚಿಕ್ಕಮಗಳೂರಿನಿಂದ ರೋಣಕ್ಕೆ ಮತ್ತು ಸುಬ್ರಹ್ಮಣ್ಯದಿಂದ ಹಿರೇಕೆರೂರಿಗೆ ಸರ್ಕಾರಿ ಬಸ್ಸುಗಳು ಸಂಚರಿಸುತ್ತಿದ್ದುದು ನಿಜವೇ ?

ಆ) ಈಗ ಸಂಚಾರವನ್ನು ನಿಲ್ಲಿಸಿರಲು ಕಾರಣವೇನು ? ಮತ್ತು ಪುನಃ ಈ ಸಂಚಾರವನ್ನು ಪ್ರಾರಂಭಿಸಿ ಜನರಿಗೆ ಅನುಕೂಲ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ನಿಜ.

ಆ) ಮಳೆಗಾಲದ ಪ್ರಯುಕ್ತ ಈ ಸಂಚಾರವನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ. ಮಳೆಗಾಲ ಕಳೆದ ನಂತರ ಅಂದರೆ ನವೆಂಬರ್ ೮೮ ರಿಂದ ಈ ಬಸ್ಸುಗಳನ್ನು ಪುನರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಈ ಉತ್ತರವು ಒಂದು ದುರ್ದೈವ ಉತ್ತರವೆಂದು ನಾನು ಭಾವಿಸುತ್ತೇನೆ ಅದಕ್ಕೆ ಕಾರಣ ಇಷ್ಟೆ ಅಧಿಕಾರಿಗಳು ನಿರ್ಲಕ್ಷತೆಯಿಂದ ಈ ಉತ್ತರವನ್ನು ಕೊಟ್ಟಿದ್ದಾರೆ ಎಂದು ಮಾನ್ಯ ಸಚಿವರಿಗೆ ಅನಿಸಲಿಲ್ಲವೇ ? ಈ ಮಾರ್ಗದಲ್ಲಿ ಮಳೆಗಾಲ ಬಂದರೆ ಬಸ್‌ನ್ನು ಓಡಿಸಬೇಡಿ ಎಂದು ಆ ಕ್ಷೇತ್ರದ ಜನರು ಹೇಳಿಲ್ಲ ವಿದ್ಯಾರ್ಥಿಗಳು ಹೇಳಿಲ್ಲ, ನಾನೂ ಹೇಳಿಲ್ಲ. ಸರ್ಕಾರಿ ಬಸ್‌ಗಳನ್ನು ಓಡಿಸಬೇಡಿ ಎಂದು ಖಾಸಗಿ ಬಸ್ ಮಾಲೀಕರು ಇವರಿಗೆ ಹೇಳಿರಬಹುದು. ಮಂಗಳೂರಿನಿಂದ ರೋಣಕ್ಕೆ ಮತ್ತು ಸುಬ್ರಹ್ಮಣ್ಯದಿಂದ ಹಿರೇಕೆರೂರಿಗೆ ಎರಡು ಬಸ್‌ಗಳು ಓಡುತ್ತಿದ್ದವು. ಈ ಬಸ್‌ಗಳನ್ನು ಇವರು ನಿಲ್ಲಿಸಿರುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ರೈತರುಗಳಿಗೆ ಬಹಳ ತೊಂದರೆಯಾಗಿದೆ. ಮಳೆಗಾಲ ಬಂತೂ ಎಂದು ರೋಡ್‌ಗಳು ಗುಂಡಿ ಬಿದ್ದಿಲ್ಲ. ರೋಡ್‌ಗಳು ಚೆನ್ನಾಗಿ ಇವೆ. ಹೀಗಿದ್ದರೂ ಈ ರೀತಿಉತ್ತರ ಕೊಡಬೇಕಾದರೆ ಅಧಿಕಾರಿಗಳು ಜೇಜವಾಬ್ದಾರಿಯಿಂದ ಉತ್ತರ ಕೊಟ್ಟಿದ್ದಾರೆಂದು ಹೇಳಬೇಕಾಗುತ್ತದೆ. ನೀವಾಗಾದರೂ ಈ ಉತ್ತರವನ್ನು ಪದನದಲ್ಲಿ ಹೇಳುವುದಕ್ಕೆ ಸ್ವಲ್ಪವೂ ಬೇಸರವಾಗಲಿಲ್ಲವೇ ? ಈ ಬಸ್‌ಗಳನ್ನು ಓಡಿಸಬೇಡಿ ಎಂದು ಖಾಸಗಿ ಬಸ್‌ನವರು ಹೇಳಿದ್ದಾರೆ. ಇದರ ಬಗ್ಗೆ ತಾವು ಎನ್‌ಕ್ವೈರಿ ಮಾಡಿಸಬೇಕು ಈ ಬಗ್ಗೆ ನಾನು ಈಗಾಗಲೇ ಎರಡು ಪತ್ರಗಳನ್ನು ತಮಗೆ ಬರೆದಿದ್ದೇನೆ. ಖಾಸಗಿಯವರ ಪ್ರಲೋಭನೆಗೆ ಒಳಗಾಗಿ ಈ ಬಸ್‌ಗಳನ್ನು ಓಡಿಸುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಉತ್ತರವನ್ನು ಜೇಜವಾಬ್ದಾರಿಯಿಂದ ಕೊಟ್ಟಿದ್ದೇನೆಯೇ ಎಂದು ಹೇಳಿದ್ದಾರೆ ಈ ಉತ್ತರವನ್ನು ನಾನೇ ಜವಾಬ್ದಾರಿಯಿಂದಲೇ ಕೊಟ್ಟಿರುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಳೆಗಾಲದಲ್ಲಿ ಬಸ್‌ಗಳನ್ನು ನಿಲ್ಲಿಸಲಾಗುತ್ತದೆ ಎಂದರೆ,ಅದಕ್ಕೆ ಏನು ಕಾರಣ ?

ಶ್ರೀ ಎಸ್. ಬಂಗಾರಪ್ಪ.—ಜೇಜವಾಬ್ದಾರಿ ಉತ್ತರವನ್ನು ಜವಾಬ್ದಾರಿಯಿಂದ ತಾವು ಹೇಳಿದರೆ ಸಾಕು.

ಶ್ರೀ ಸಿದ್ದರಾಮಯ್ಯ —ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವಂಥ ಮಾರ್ಗಸೂಚಿಗಳಲ್ಲಿ ಮಾತ್ರ ಮಳೆಗಾಲದಲ್ಲಿ ಬಸ್‌ಗಳನ್ನು ನಿಲ್ಲಿಸಲಾಗುತ್ತಿಲ್ಲ. ರಾಜ್ಯದ ನಿರ್ದಿಷ್ಟವಾದಂಥ ಮಾರ್ಗ ಸೂಚಿಗಳಲ್ಲಿ ಮಳೆಗಾಲದಲ್ಲಿ ರೆವಿನ್ಯೂ ಕಡಿಮೆ ಬರುವ ಉದ್ದೇಶದಿಂದ ಬಸ್‌ಗಳನ್ನು ನಿಲ್ಲಿಸತಕ್ಕ ವ್ಯವಸ್ಥೆಯು ಈ ಸಂಸ್ಥೆಯಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಖಾಸಗಿ ಬಸ್‌ಗಳ ಮಾಲೀಕರ ಪ್ರಲೋಭನೆಗೆ ಒಳಗಾಗಿ ಈ ಬಸ್‌ಗಳನ್ನು ಓಡಿಸುವುದನ್ನು ನಿಲ್ಲಿಸಿಲ್ಲ. ಈ ಬಸ್‌ಗಳನ್ನು ದಿನಾಂಕ ೮–೭–೮೮ ರಿಂದ ಮಾತ್ರ ನಿಲ್ಲಿಸಲಾಗಿದೆ. ಪುನಃ ನವಂಬರ್ ತಿಂಗಳಿನಿಂದ ಓಡಿಸಲಾಗುತ್ತದೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಳೆಗಾಲದಲ್ಲಿ ರೆವಿನ್ಯೂ ಕಡಿಮೆ ಬರುತ್ತದೆಂದು ಹೇಳಿರುವುದು ಸರಿಯಲ್ಲ. ಈ ಮಾರ್ಗದಲ್ಲಿ ಬಸ್‌ಗಳನ್ನು ಓಡಿಸದೆ ನಿಲ್ಲಿಸಿರುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ರೈತರುಗಳಿಗೆ ಬಹಳ ತೊಂದರೆಯಾಗಿದೆ.

ಅಧ್ಯಕ್ಷರು.—ದಸರಾ ಹಬ್ಬ ಮುಗಿದ ಮೇಲೆ ಬಸ್‌ಗಳನ್ನು ಪ್ರಾರಂಭಿಸ್ತೀನೆಂದು ತಾವು ಹೇಳಿ.

ಶ್ರೀ ಸಿದ್ದರಾಮಯ್ಯ. —ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಎಂದರೆ, ಖಾಸಗಿ ಬಸ್ ಮಾಲೀಕರು ಹೇಳಿರುವುದರಿಂದ ಬಸ್‌ಗಳನ್ನು ಓಡಿಸುತ್ತಿಲ್ಲವೆಂದು ಹೇಳಿದ್ದಾರೆ ನಾನು ಇದರ ಬಗ್ಗೆ ಹೇಳುವುದೇನೆಂದರೆ, ನಿರ್ದಿಷ್ಟವಾಗಿ ಇಂಥ ಅಧಿಕಾರಿಗಳು ಖಾಸಗಿ ಬಸ್ ಮಾಲೀಕರ ಜೊತೆ ಶಾಮೀಲಾಗಿದ್ದಾರೆಂದು ದೂರುಗಳನ್ನು ಕೊಟ್ಟರೆ ನಾನು ಎನ್‌ಕ್ವೈರಿ ಮಾಡಿಸುತ್ತೇನೆ. ದೂರುಗಳನ್ನು ಕೊಟ್ಟರೆ ಶಾಮೀಲಾಗಿರುವವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಬಹುದು.

ಶ್ರೀ ಬಿ.ಆರ್. ನೀಲಕಂಠಪ್ಪ.—ಖಾಸಗಿ ಬಸ್ ಮಾಲೀಕರು ಹೇಳಿರುವುದರಿಂದಲೇ ಈ ಬಸ್‌ಗಳನ್ನು ಓಡಿಸುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಿಂಧ್ಯಾರವರು ಸಾರಿಗೆ ಸಚಿವರಾದ್ದಾಗಲೂ ಪತ್ರ ಬರೆದಿದ್ದೆ ನಿಮಗೂ ಪತ್ರವನ್ನು ಬರೆದಿದ್ದೇನೆ.

ಶ್ರೀ ಸಿದ್ದರಾಮಯ್ಯ.—ಇದರ ಬಗ್ಗೆ ವಿಚಾರಣೆ ಮಾಡಿಸೋಣ. ಇದೊಂದೇ ಮಾರ್ಗವಲ್ಲದೇ ರಾಜ್ಯದ ಅನೇಕ ಮಾರ್ಗಗಳಲ್ಲಿ ಮಳೆಗಾಲದಲ್ಲಿ ರೆವಿನ್ಯೂ ಸರಿಯಾಗಿ ಬರದೇ ಇರುವುದರಿಂದ ಬಸ್‌ಗಳನ್ನು ನಿಲ್ಲಿಸಲಾಗುತ್ತದೆ ಕೆಲವು ಸಂದರ್ಭಗಳಲ್ಲಿ ಮಳೆ ಹೆಚ್ಚು ಬೀಳುವ ಕಡೆಗಳಲ್ಲೂ ಬಸ್‌ಗಳನ್ನು ನಿಲ್ಲಿಸಬೇಕಾದ ಪ್ರಸಂಗ ಬರುತ್ತದೆ. ಮಳೆಗಾಲ ಕಳೆದ ಮೇಲೆ ಬಸ್‌ಗಳ ಸಂಚಾರವನ್ನು ಪುನರ್ ಆರಂಭ ಮಾಡುತ್ತೇವೆ ಇದು ಮೊದಲಿನಿಂದಲೂ ಮಾಡಿಕೊಂಡು ಬಂದಿರತಕ್ಕ ಪದ್ಧತಿ. ಅದೇ ಪ್ರಕಾರವಾಗಿ ಇಲ್ಲಿಯೂ ಕೂಡ ಸರಕಾರಿ ಬಸ್ ಸಂಚಾರವನ್ನು ೨೬–೬–೧೯೮೮ ಮತ್ತು ೮–೭–೧೯೮೮ ರಿಂದ ನಿಲ್ಲಿಸಲಾಗಿತ್ತು ಮಳೆಗಾಲ ಕಳೆದ ನಂತರ ಅಂದರೆ ನವೆಂಬರ್ ೧೯೮೮ ರಿಂದ ಈ ಬಸ್ಸುಗಳನ್ನು ಪುನರಾರಂಭಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ನಮಗೆ ಬೇರೂರಿನಿಂದ ಭದ್ರಾವತಿಗೆ ಷೆಟಲ್ ಬಸ್ ಸಂಚಾರ ಇಲ್ಲದೇ ಬಹಳ ತೊಂದರೆಯಾಗಿದೆ ಆದ್ದರಿಂದ ಸಾರಿಗೆ ಸಂಸ್ಥೆಯ ವತಿಯಿಂದ ಒಂದು ಷಟಲ್ ಬಸ್ ಅನ್ನು ಸದರಿ ಮಾರ್ಗಕ್ಕೆ ಓಡಿಸಬೇಕು ಅಥವಾ ಖಾಸಗಿ ಮೆಟಡೋರ್ ನವರಿಗಾದರೂ ಆ ಮಾರ್ಗದಲ್ಲಿ ಸಂಚಾರಕ್ಕೆ ಪರವಾನಿಗೆಯನ್ನು ಕೊಟ್ಟು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಹೀಗೆ ಷೆಟಲ್ ಬಸ್ ಸಂಚಾರ ಇಲ್ಲದ ಕಾರಣ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿದೆ ಈಗ ಅದೇ ಮಾರ್ಗದಲ್ಲಿ ಎಕ್ಸ್‌ಪ್ರೆಸ್ ಬಸ್ ಇದ್ದರೂ ಕೂಡ ಅದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿಲ್ಲ.

ಶ್ರೀ ಸಿದ್ದರಾಮಯ್ಯ.—ಆ ಬಗ್ಗೆ ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ಕ್ರಮಾಂಕ ೧೦೭೬ ಶ್ರೀ ಕೆ. ಕುಶಾಲ ಗೈರು ಹಾಜರು.

ಪ್ರಶ್ನೆ ಕ್ರಮಾಂಕ ೧೦೭೭ ಶ್ರೀ ಶಿವಶೇಖರಗೌಡ ಶಿರವಾಳ

ತಮ್ಮ ಪ್ರಶ್ನೆಯು ಆರ್‌ಡಿಪಿಆರ್ ಡಿಪಾರ್ಟ್‌ಮೆಂಟ್‌ಗೆ ಹೋಗಿದೆ ಅವರು ಉತ್ತರ ಕೊಡುತ್ತಾರೆ.

ಪ್ರಶ್ನೆ ಕ್ರಮಾಂಕ ೧೦೭೮ ಶ್ರೀ ಎಂ.ಎಸ್. ಪಾಟೀಲ್

ತಮ್ಮ ಪ್ರಶ್ನೆಯು ಇಂಡಸ್ಟ್ರೀಯಲ್ ಕೋ–ಆಪರೇಟಿವ್ ಡಿಪಾರ್ಟ್‌ಮೆಂಟ್‌ಗೆ ಹೋಗಿದೆ, ಅವರು ಉತ್ತರ ಕೊಡುತ್ತಾರೆ.

ಪ್ರಶ್ನೆ ಕ್ರಮಾಂಕ ೧೦೭೯ ಶ್ರೀ ಬಿ. ಸ್ವಾಮಿರಾವ್ ಗೈರು ಹಾಜರಾಗಿದ್ದಾರೆ.

ಅಧ್ಯಕ್ಷರು.—ಈಗ ಗೈರು ಹಾಜರು ಇದ್ದವರ ಹೆಸರನ್ನು ಪುನಃ ಹೇಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.— ಗೈರು ಹಾಜರು.

ಶ್ರೀ ಕೆ. ವಸಂತ ಬಂಗೇರ.—ತಮ್ಮ ಪ್ರಶ್ನೆ ಕ್ರಮಾಂಕ ೧೦೬೯ನ್ನು ಕೇಳಿ.

ವಾಹನ ಚಾಲಕರ ವರ್ಗಾವಣೆ ಬಗ್ಗೆ

೪೦೬೪ ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ)—ಮಾನ್ಯ ರೇಷ್ಮೆ ಮತ್ತು ಪಶುಸಂಗೋಪನೆ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕ್ಯೂಲಾದಲ್ಲಿರುವ ಜಿಲ್ಲಾ ಜಾನುವಾರು ಕ್ಷೇತ್ರದ ಹಂದಿ ತಳಿ ಸಂವರ್ಧನ ಕೇಂದ್ರದ ವಾಹನ ಚಾಲಕರು ಅಲ್ಲಿ ೨೦ ವರ್ಷಗಳಿಂದಲೂ ಮಿಕ್ಕಿ ಸೇವೆ ಸಲ್ಲಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರದ ನಿಯಮದಂತೆ ಈ ವಾಹನ ಚಾಲಕರಿಗೆ ವರ್ಗಾವಣೆ ಇಲ್ಲವೆ ?

ಇ) ವರ್ಗಾವಣೆ ಇದ್ದಲ್ಲಿ ಈ ವರೆಗೆ ಯಾಕೆ ವರ್ಗಾವಣೆ ಮಾಡಲಿಲ್ಲ ಆದಕ್ಕೆ ಕಾರಣಗಳೇನು ?

ಶ್ರೀ ಕೃಷ್ಣ (ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖಾ ಸಚಿವರು)—

ಅ) ೧೫ ವರ್ಷಗಳಿಂದ (ದಿನಾಂಕ ೧೭-೩-೭೩ ರಿಂದ) ಸೇವೆ ಸಲ್ಲಿಸುತ್ತಿದ್ದಾರೆ.

ಆ) ಇದೆ.

ಇ) ೧೯೭೮ಕ್ಕೆ ಮುಂಚೆ ಚಾಲಕ ವರ್ಗದವರು 'ಡಿ' ದರ್ಜೆ ನೌಕರರ ವರ್ಗಕ್ಕೆ ಸೇರಿದ್ದ ಪ್ರಯುಕ್ತ ಸಾಮಾನ್ಯವಾಗಿ 'ಡಿ' ದರ್ಜೆ ನೌಕರರಿಗೆ ವರ್ಗಾವಣೆ ಮಾಡುವಂತಿರಲಿಲ್ಲ. ಆದುದರಿಂದ ಆಗ ವರ್ಗಾವಣೆ ಪ್ರಶ್ನೆ ಬರುವುದಿಲ್ಲ. ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ ೮೬ ಎಸ್‌ಟಿಆರ್ ೭೬ ದಿನಾಂಕ ೨೨-೧೧-೧೯೭೮ ಪ್ರಕಾರ ವಾಹನ ಚಾಲಕರಿಗೆ ಜಿಲ್ಲೆಯಿಂದ ಹೊರಗೆ ವರ್ಗಾವಣೆ ಮಾಡುವಂತಿಲ್ಲ.

ಚಾಲಕರ ಮೇಲೆ ಏನಾದರೂ ದೂರುಗಳಿದ್ದು ಅದು ಸ್ಥಿರಪಟ್ಟಲ್ಲಿ, ಅಂತಹ ಸಂದರ್ಭಗಳಲ್ಲಿ ಚಾಲಕರನ್ನು ವರ್ಗಾವಣೆ ಮಾಡಬಹುದು. ಈ ಬಗ್ಗೆ ಈಗಾಗಲೇ ಜಿಲ್ಲಾ ಪರಿಷತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೂ ಮತ್ತು ಇಲಾಖಾ ಜಂಟಿ ನಿರ್ದೇಶಕರು, ಮೈಸೂರು ಇವರಿಗೂ ಈ ನೌಕರರನ್ನು ವರ್ಗಾವಣೆ ಮಾಡಲು ತಿಳಿಸಲಾಗಿದೆ.

ಶ್ರೀ ಕೆ. ವಸಂತಬಂಗೇರ —ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಸದರಿ 'ಡಿ' ವರ್ಗದ ನೌಕರರನ್ನು ಜಿಲ್ಲೆಯಿಂದ ಹೊರಗಡೆ ವರ್ಗಾವಣೆ ಮಾಡುವಂಥಾದ್ದಕ್ಕೆ ಅವಕಾಶ ಇಲ್ಲವೆಂದು ಹೇಳಿದ್ದಾರೆ. ಈ ವಾಹನ ಚಾಲಕರ ಮೇಲೆ ಅನೇಕ ವರ್ಷಗಳಿಂದ ಅನೇಕ ರೀತಿಯ ದೂರುಗಳನ್ನು ಸರಕಾರಕ್ಕೆ ಕೊಟ್ಟಿದ್ದು, ಅದರ ಪ್ರಕಾರ ಹಿಂದಿನ ಸಚಿವರು ಸದರಿ ಚಾಲಕನನ್ನು ವರ್ಗಾವಣೆ ಮಾಡಬೇಕೆಂದು ಆಜ್ಞೆಯನ್ನು ಮಾಡಿದ್ದಾರೆ. ಒಂದು ವೇಳೆ ಜಿಲ್ಲೆಯ ಹೊರಗಡೆ ವರ್ಗಾವಣೆ ಮಾಡುವುದಕ್ಕೆ ನಿಯಮಗಳು ಇಲ್ಲವಾದಲ್ಲಿ ಇವರನ್ನು ಜಿಲ್ಲೆಯ ಒಳಗಡೆ ಏತಕ್ಕೆ ವರ್ಗಾವಣೆ ಮಾಡಬಾರದು ? ಈ ಚಾಲಕನ ಮೇಲೆ ಅನೇಕ ರೀತಿಯ ದೂರುಗಳಿದ್ದು ಅವುಗಳಲ್ಲಿ ಪ್ರಾಮುಖ್ಯವಾಗಿ, ಪೆಟ್ರೋಲ್‌ನ್ನು ಕದ್ದು ಮಾರಾಟ ಮಾಡುವುದು, ಫಾರ್ಮ್‌ನಲ್ಲಿನ ಹೆಲ್ಲು ಕದ್ದು ಮಾರಾಟ ಮಾಡುವುದು, ಅಲ್ಲಿಯ ಮರಗಳನ್ನು ಕಡಿದು ಮಾರಾಟ ಮಾಡುವುದು, ಚಾಕೂ, ಚೂರಿ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿರುವುದು ಮುಂತಾಗಿ ದೂರುಗಳು ಇವೆ. ಈ ಸಂಬಂಧವಾಗಿ ಹಿಂದಿನ ಸಚಿವರು ವರ್ಗಾವಣೆಗೆ ಆಜ್ಞೆ ಮಾಡಿದ್ದರೂ ಕೂಡ ತಾವುಗಳು ಆಗುವುದಿಲ್ಲ ಎಂದು ಹೇಳಿದ್ದೀರಿ. ಹೀಗೆ ದೂರುಗಳು ಇದ್ದರೂ ಕೂಡ ಏನೂ ಕ್ರಮ ತೆಗೆದುಕೊಳ್ಳದೇ, ವರ್ಗಾವಣೆ ಮಾಡದೇ ಇರುವುದು ಸೂಕ್ತವೇ ?